**ಪಾಠ-10** **ಫೆಬ್ರವರಿ 27-ಮಾರ್ಚ್ 5**

# ಯೋಚಿಸಲಾಗದ್ದನ್ನು ಮಾಡುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 50:4-10; ಯೆಶಾಯ 52:13 ರಿಂದ 5:12 ರವರೆಗೆ, ಯೆಶಾಯ 53:9, ಯೆಶಾಯ 53:10-12.

**ಸ್ಮರಣವಾಕ್ಯ : "ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು"** (ಯೆಶಾಯ 53:5).

ಚೀಣಾ ದೇಶದ ಕ್ರಿಸ್ತವಿಶ್ವಾಸಿ ಲಾಫೂಕ್ ಎಂಬಾತನಿಗೆ ದಕ್ಷಿಣ ಅಮೇರಿಕಾದಲ್ಲಿ ಗುಲಾಮರಾಗಿ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ತನ್ನ ದೇಶಬಾಂಧವರ ಬಗ್ಗೆ ಅವನಲ್ಲಿ ಅನುಕಂಪ ಹುಟ್ಟಿತು. ಆ ಗುಲಾಮರಿಗೆ ಸುವಾರ್ತೆಯ ನಿರೀಕ್ಷೆಯನ್ನು ಕೊಡಲು ಆತನು ಬಯಸಿದನು, ಆದರೆ ಅವರನ್ನು ತಲುಪುವುದಾದರೂ ಹೇಗೆ? ಅದಕ್ಕೆ ಆತನು ಕಂಡುಕೊಂಡ ಪರಿಹಾರವೇನೆಂದರೆ ತನ್ನನ್ನು ತಾನು ಐದು ವರ್ಷಗಳ ಅವಧಿಗೆ ಗುಲಾಮನನ್ನಾಗಿ ಮಾರಿಕೊಂಡು ಅವರ ಹತ್ತಿರ ಹೋಗುವುದು. ಅವನು ಗುಲಾಮನಾಗಿ ಡೆಮೆರಾರಾಕ್ಕೆ ಒಯ್ಯಲ್ಪಟ್ಟನು, ಅಲ್ಲೇ ಆತನು ಗಣಿಯ ಕೆಲಸವನ್ನು ಮಾಡುತ್ತ ತನ್ನ ಜೊತೆಗಾರರಿಗೆ ಯೇಸುವಿನ

---

ಈ ಪಾಠವನ್ನು ಮಾರ್ಚ್ 6ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಬಗ್ಗೆ ತಿಳಿಸಿದನು. ಲಾಪೂಕನು ಸತ್ತುಹೋದನು. ಆದರೆ ಸಾಯುವುದರೊಳಗೆ ಸುಮಾರು 200 ಜನರಿಗೆ ಸುವಾರ್ತೆಯನ್ನು ಸಾರಿ ಅವನು ಯೇಸುಕ್ರಿಸ್ತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವಂತೆ ಮಾಡಿದ್ದನು.

ಇತರರಿಗೆ ಒಳ್ಳೆಯದನ್ನು ಮಾಡುವ ಸಲುವಾಗಿ ಆತನು ಮಾಡಿದ ಸ್ವತ್ಯಾಗವು ಆಶ್ಚರ್ಯಕರವಾಗಿದೆ! ಎಂಥಾ ಉದಾಹರಣೆ! "ತನ್ನನ್ನು ತಾನು ತಗ್ಗಿಸಿಕೊಂಡು ಗುಲಾಮನನ್ನಾಗಿ ಮಾಡಿಕೊಂಡಿದ್ದು" ಯಾರು ಯೋಚಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದ ಕೆಲಸ (ಫಿಲಿ 2:7) ಯೇಸುಕ್ರಿಸ್ತನೂ ಸಹ ಪಾಪದ ಗುಂಡಿಯಲ್ಲಿ ಯರೂ ತಲುಪಲಾಗದೆ ಬಿದ್ದಿದ್ದ ನನ್ನನ್ನು ನಿಮ್ಮನ್ನು ಮತ್ತು ಇಡೀ ಲೋಕವನ್ನು ತಲುಪಿದನು.

ನೂರಾರು ವರ್ಷಗಳು ಮುಂಚಿತವಾಗಿಯೇ ಪ್ರವಾದಿಸಿದಂತೆ ನಂಬಲಾಗದ ಈ ಘಟನೆಯು ನಡೆಯಿತು. ಈ ವಾರದಲ್ಲಿ ಇದರ ಬಗ್ಗೆ ಗಮನ ಹರಿಸೋಣ.

**ಭಾನುವಾರ** **ಫೆಬ್ರವರಿ 28**

## ಯೆಶಾಯನ ಪರೀಕ್ಷಿಸುವ ಸತ್ಯ (ಯೆಶಾಯ 50:4–10)

ಮೆಸ್ಸೀಯನ ಬಗ್ಗೆ ಯೆಶಾಯನಿಗೆ ಕೇವಲ ಮಾಹಿತಿ ನೀಡುವ ಉದ್ದೇಶವಿದಿದ್ದರೆ, ಅಗತ್ಯವಾದ ವಿವರಣೆಗಳನ್ನೆಲ್ಲಾ ಆತನು ಒಮ್ಮೆಲೆ ಜೋಡಿಸಿಡುತ್ತಿದ್ದನು. ಆದರೆ ಆತನು ದೇವರ ಸೇವಕನನ್ನು ಕುರಿತು ಹಂತಹಂತವಾಗಿ ಕಲಿತುಕೊಳ್ಳುವಂತೆ, ಪ್ರೇರೇಪಿಸುವುದಕ್ಕೆ ತನ್ನ ಓದುಗರಿಗೆ ವರ್ಣರಂಜಿತವಾದ ದೃಶ್ಯಗಳನ್ನು ಸ್ವರಮೇಳದಲ್ಲಿ ಅನೇಕ ಸಂಗೀತವಾದ್ಯಗಳನ್ನು ಒಟ್ಟಾಗಿ ನುಡಿಸುವಂತೆ ಮತ್ತೆ ಮತ್ತೆ ತೋರಿಸುತ್ತಾ ಹೋಗುತ್ತಾನೆ. ಆತನು ದೇವರ ಸಂದೇಶ ಪೂರ್ಣಚಿತ್ರವು ಮನದಲ್ಲಿ ಮೂಡುವ ಹಾಗೆ ಹಂತಹಂತವಾಗಿ ಅದರ ಒಂದೊಂದು ಅಂಶಗಳನ್ನು ಬಿಡಿಸುತ್ತಾ ಹೋಗುತ್ತಾನೆ. ಯೆಶಾಯನು ಕಲಾವಿದನಾಗಿ (ವರ್ಣಚಿತ್ರಕಾರ) ಕೇಳುಗನ ಆತ್ಮವನ್ನು (ಮನಸ್ಸನ್ನು) ತೈಲಪಟವನ್ನಾಗಿ ಮಾಡಿಕೊಳ್ಳುತ್ತಾನೆ.

ಯೆಶಾಯ 50:4–10ರ ವಚನಗಳನ್ನು ಓದಿರಿ. ಈ ವಚನಗಳು ಹೇಳುವುದನ್ನು ಸಂಗ್ರಹಿಸಿ ಬರೆಯಿರಿ. ಈ ವಚನವೃಂದದಲ್ಲಿ ಯೇಸುಕ್ರಿಸ್ತನನ್ನು ಹೇಗೆ ಕಾಣುವಿರಿ?

ಯೆಶಾಯ 49:7ರಲ್ಲಿ ಯೇಸುಕ್ರಿಸ್ತನು ಮನಃಪೂರ್ವಕವಾಗಿ ತಿರಸ್ಕರಿಸಲ್ಪಟ್ಟವನೂ ಅನ್ಯಜನಾಂಗಕ್ಕೆ ಅಸಹ್ಯನೂ ಜನದೊಡೆಯರ ಸೇವಕನೂ ಆಗಿರುತ್ತಾನೆ. ಆದರೆ ಅದೇ ಜನದೊಡೆಯರು (ಅರಸರು) ಆತನನ್ನು ನೋಡಿ ಎದ್ದು ನಿಲ್ಲುತ್ತಾರೆ. ಅಧಿಪತಿಗಳು ಅಡ್ಡಬೀಳುತ್ತಾರೆ ಎಂಬುದಾಗಿ ಕಾಣುತ್ತೇವೆ. ಯೆಶಾಯ 50ನೇ ಅಧ್ಯಾಯದಲ್ಲಿ ಬಳಲಿ ಹೋದವರನ್ನು ಸುಧಾರಿಸುವಂತೆ ಸೌಮ್ಯವಾದ ನಾಲಿಗೆಯನ್ನು ದೇವರು ನನಗೆ ದಯಪಾಲಿಸಿದ್ದಾನೆಂದು ಆ ಸೇವಕನು ಹೇಳುವುದನ್ನು ಕಾಣುತ್ತೇವೆ. ಮೂಲಕ ಸೇವಕನನ್ನು ಸಮರ್ಥಿಸುವ ದಾರಿಯು ಆತನು ಒಳಪಡುವ ದೈಹಿಕ ಅಪಮಾನಗಳ ಮೂಲಕ ಸಾಗುತ್ತಾ ಹೋಗುತ್ತದೆ (ಯೆಶಾಯ 50:6).

ಇಂತಹ ದೈಹಿಕ ಅಪಮಾನಗಳು ಆಧುನಿಕ ಪಾಶ್ಚಾತ್ಯ ಸಂಸ್ಕೃತಿ ಬಹಳ ಕೆಟ್ಟದಾಗಿ ಕಾಣಿಸುತ್ತವೆ. ಆದರೆ ಪುರಾತನ ಮೂಡಣ ದೇಶಗಳ ಸಂಸ್ಕೃತಿಯಲ್ಲಿ ಗೌರವವು ಒಬ್ಬ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಜೀವಮರಣಗಳ ವಿಷಯವಾಗಿರುತ್ತಿತ್ತು. ಯಾರನ್ನಾದರೂ ಹೀಗೆ ನೀವು ಅವಮಾನಿಸಿದರೆ ಅಥವಾ ಕೆಟ್ಟದಾಗಿ ನಡೆಸಿಕೊಂಡರೆ ನಿಮಗೆ ಸಂರಕ್ಷಣೆ ಬೇಕಾಗುತ್ತಿತ್ತು. ಇಲ್ಲದಿದ್ದರೆ ಅಪಮಾನಿತನಾದ ವ್ಯಕ್ತಿಯು ಅಥವಾ ಅವನ ಕಡೆಯವರು ಸೇಡು ತೀರಿಸಿಕೊಳ್ಳುವ ಅವಕಾಶಕ್ಕೆ ಕಾಯುತ್ತಿರುತ್ತಾರೆ.

ಅರಸನಾದ ದಾವೀದನು ಅಮ್ಮೋನಿಯರ ಮೇಲೆ ಬಿದ್ದು ಅವರ ದೇಶವನ್ನು ವಶಪಡಿಸಿಕೊಂಡನು (2 ಸಮುವೇಲ 10:1–12). ಯಾಕೆಂದರೆ ಅಮ್ಮೋನಿಯರ ಅರಸನಾದ ಹಾನೂನನು ದಾವೀದನು ಕಳುಹಿಸಿದ ರಾಯಭಾರಿಗಳನ್ನು ಹಿಡಿದು ಅವರ ಗಡ್ಡವನ್ನು ಅರ್ಧ ಬೋಳಿಸಿ ಅವರ ನಿಲುವಂಗಿಗಳನ್ನು ಸೊಂಟದ ಕೆಳಭಾಗದಲ್ಲಿ ಕತ್ತರಿಸಿ ಅವಮಾನಪಡಿಸಿದ್ದನು (2 ಸಮು 10:4). ಆದರೆ ಯೆಶಾಯ 50ನೇ ಅಧ್ಯಾಯದಲ್ಲಿ ದೇವರ ಸೇವಕನ ಗಡ್ಡದಿಂದ ಕೂದಲು ಕಿತ್ತು ನೋವುಕೊಟ್ಟರು ಮತ್ತು ಅವನ ಮುಖಕ್ಕೇ ಉಗುಳಿದರು. ಈ ಕೃತ್ಯವು ಅಂತರಾಷ್ಟ್ರೀಯ ಅಂತರ್‌ಲೋಕದ ಮಟ್ಟದಾಗಿತ್ತು ಯಾಕೆಂದರೆ ಅಪಮಾನಕ್ಕೆ ಗುರಿಯಾದ ವ್ಯಕ್ತಿಯು ರಾಜಾಧಿರಾಜನಾದ ದೇವರ ರಾಯಭಾರಿಯಾಗಿದ್ದನು.

ಯೆಶಾಯ 9:6,7 ಮತ್ತು ಯೆಶಾಯ 11:1–16ರ ವಚನಗಳನ್ನು ಸೇವಕನ ಬಗ್ಗೆ ಹೇಳುವ ಇತರ ವಚನಗಳಿಗೆ ಹೋಲಿಸಿದಾಗ ಆ ಸೇವಕನು ಬಲಾಢ್ಯನಾದ ವಿಮೋಚಕನು, ರಾಜಾಧಿರಾಜನು ಎಂಬುದು ಕಂಡುಬರುತ್ತದೆ. ಇಷ್ಟೆಲ್ಲಾ ಮಾನ ಮತ್ತು ಅಧಿಕಾರವಿದ್ದಾಗ್ಯೂ ನಮ್ಮ ಆಲೋಚನೆಗೆ ಮೀರಿದ ಕಾರಣದಿಂದ ಆತನು ತನ್ನನ್ನು ತಾನು ರಕ್ಷಿಸಿಕೊಳ್ಳಲಿಲ್ಲ. ಜನರು ಇದನ್ನು ನಂಬಲಿಲ್ಲ ಎಂಬುದು ಬಹಳ ವಿಚಿತ್ರವಾದ ವಿಷಯವಾಗಿದೆ. ಶಿಲುಬೆಯ ಹತ್ತಿರದಲ್ಲಿ ನಿಂತಿದ್ದ ಧಾರ್ಮಿಕ ನಾಯಕರು ಯೇಸುವನ್ನು ಪರಿಹಾಸ್ಯ ಮಾಡಿದರು ಈತನು ಮತ್ತೊಬ್ಬರನ್ನು ರಕ್ಷಿಸಿದನು, ಈತನು ನಿಜವಾಗಿಯೂ ದೇವರು ಆರಿಸಿಕೊಂಡ ಮೆಸ್ಸೀಯನಾಗಿದ್ದರೆ ತನ್ನನ್ನು ತಾನು ರಕ್ಷಿಸಿಕೊಳ್ಳಲಿ! ಎಂದರು (ಲೂಕ 23:35). ಈತನು ಶಿಲುಬೆಯಿಂದ ಕೆಳಗಿಳಿದು ಬರಲಿ ಆವಾಗ ನಾವು ಈತನನ್ನು ನಂಬುತ್ತೇವೆ ಎಂದು ಹೇಳಿದರು (ಮತ್ತಾಯ 27:42).

ಯೆಶಾಯ 50:4–10 ವಚನಗಳನ್ನು ಓದಿರಿ. ಇಲ್ಲಿ ನಮ್ಮ ನಿಜಜೀವನಕ್ಕೆ ಅನ್ವಯವಾಗುವ ಯಾವ ಆತ್ಮೀಕ ನಿಯಮಗಳು ನಿರೂಪಿತವಾಗಿವೆ? ನೀವು ಮಾಡಿದ ಪಟ್ಟಿಯ ಅನುಸಾರ ನಿಮ್ಮನ್ನೇ ನೀವು ನೋಡಿಕೊಳ್ಳಿರಿ. ಯಾವ ವಿಷಯಗಳಲ್ಲಿ ನಿಮ್ಮನ್ನು ನೀವು ಉತ್ತಮರನ್ನಾಗಿ ಮಾಡಿಕೊಳ್ಳಬೇಕು? ಒಂದು ವೇಳೆ ನೀವು ಅಧೈರ್ಯಪಟ್ಟುಕೊಂಡಿದ್ದರೆ ಈ ವಾರದ ಉಳಿದ ಪಾಠಗಳನ್ನು ಓದಿರಿ.

**ಸೋಮವಾರ** **ಮಾರ್ಚ್ 1**

## ಬಾಧೆಗೊಳಗಾದ ಸೇವಕನ ಗೀತೆ (ಯೆಶಾಯ 52:13–53:12)

ಯೆಶಾಯ 52:13 ರಿಂದ 53:12 ನೆಯ ವಚನಗಳು ಬಾಧಿತನಾದ ಸೇವಕನ ಗೀತೆ ಎಂದು ಪ್ರಸಿದ್ಧವಾಗಿದೆ. ಇದು ಯೆಶಾಯನನ್ನು ಸುವಾರ್ತೆಯ ಪ್ರವಾದಿ ಎಂಬ ಹೆಸರನ್ನು ದೃಢಪಡಿಸುತ್ತದೆ. ಸುವಾರ್ತೆಯ ಉತ್ಕೃಷ್ಟತೆಗೆ ಸರಿ ಹೊಂದುವುದರಿಂದ ಈ ಗೀತೆಯು ಇತರೆ ಸಾಹಿತ್ಯಗಳಿಗೆ ಗೋಪುರದೋಪಾದಿಯಲ್ಲಿ ಇದೆ. ಈ ಗೀತೆಯ (ಪದ್ಯದ) ಸಾಲುಗಳು ಅಚ್ಚರಿ ಮೂಡಿಸುವಷ್ಟು ಚಿಕ್ಕದಾಗಿದ್ದರೂ ಪ್ರತಿಪದವೃಂದವೂ ಆಳವಾದ

ಅರ್ಥತುಂಬಿಕೊಂಡು ಪಾಪದಲ್ಲಿ ಮುಳುಗಿ ಕಳೆದುಹೋದ ಮಾನವ ಕುಲದ ರಕ್ಷಣೆಗಾಗಿ ನಿಮ್ಮ ಆಲೋಚನೆಗೆ ಮೀರಿದ ದೇವರ ಹಂಬಲದ ತಿರುಳನ್ನು ಪ್ರಕಟಿಸುತ್ತದೆ. ಯೆಶಾಯನ ಮಾತಿನ ಇಂಗಿತವು (ಸಾರವು) ಈ ಗೀತೆಯೊಂದರಲ್ಲಿ ಮಾತ್ರವೇ ಇಲ್ಲ. ಇದಕ್ಕಿಂತ ಮುಂಚಿನ ಅಧ್ಯಾಯಗಳಿಂದಲೂ ಆತನು ಓದುಗರನ್ನು ಮೆಸ್ಸೀಯನಿಗೆ ಸಂಬಂಧವಾದ ಪ್ರಸಂಗಕ್ಕೆ ಸಿದ್ಧಪಡಿಸುತ್ತಾ ಬಂದಿದ್ದಾನೆ. ಈ ಲೋಕದಲ್ಲಿ (ಭೂಮಿಯಲ್ಲಿ) ಮೆಸ್ಸೀಯನ ಜೀವನದ ಸಮಗ್ರತೆಯನ್ನು ಕಟ್ಟಿಕೊಡುವ ಸಲುವಾಗಿ ಯೆಶಾಯನು ಆತನ ಗರ್ಭಾವಣೆ ಮತ್ತು ಜನನದಿಂದ ಆರಂಭಿಸುತ್ತಾನೆ (ಯೆಶಾಯ 7:14). ಆತನನ್ನು ದಾವೀದನ ಸಿಂಹಾಸನದಲ್ಲಿ ಶಾಶ್ವತವಾಗಿ ಆಳುವ ದೈವೀಕ ಅರಸನನ್ನಾಗಿ ಗುರುತಿಸುತ್ತಾನೆ (ಯೆಶಾಯ 9:6,7). ಇಸ್ರಾಯೇಲ್ಯರನ್ನು ಮರುಸ್ಥಾಪಿಸುವ ಆತನ ಕೆಲಸವನ್ನು ವಿವರಿಸುತ್ತಾನೆ (ಯೆಶಾಯ 11:1–16) ಮತ್ತು ಜನರನ್ನು ಅನ್ಯಾಯ ಹಾಗು ಹಿಂಸೆಗಳಿಂದ ಬಿಡಿಸಲು ನಡೆಸುವ ಗದ್ದಲವಿಲ್ಲದ ಸೇವೆಯ ಬಗ್ಗೆ ಹೇಳುತ್ತಾನೆ (ಯೆಶಾಯ 42:1–7) ನಂತರ ಯೆಶಾಯನು ಮೆಸ್ಸೀಯನು ಉನ್ನತಸ್ಥಾನಕ್ಕೆ ಏರುವ ಮೊದಲು ಒಳಗಾಗುವ ಯಾತನೆಯ ಅದ್ಧೂರಿ ಚಿತ್ರವನ್ನು ನಿರೂಪಿಸುತ್ತಾನೆ (ಯೆಶಾಯ 49:1–12, ಯೆಶಾಯ 50:6–10). ಈವಾಗ ಬಾಧಿತನಾದ ಸೇವಕನ ಗೀತೆಯು ದುರಂತದ ಆಳವನ್ನು ನಿಖರವಾಗಿ ತೋರಿಸುತ್ತಾ ಹೋಗುತ್ತದೆ.

ಮೇಲಿನ ಪುಟಭಾಗದಲ್ಲಿ ನೀವು ಪಟ್ಟಿ ಮಾಡಿರುವ ವಿಭಾಗಗಳನ್ನು ಮತ್ತೆ ಗಮನಿಸಿರಿ. ಅವುಗಳು ಮೆಸ್ಸೀಯನಾದ ಯೇಸುವಿನ ಬಗ್ಗೆ ಏನು ಹೇಳುತ್ತವೆ ಅವಲೋಕಿಸಿರಿ. ಯೆಶಾಯ 52 ಮತ್ತು 53 ಅಧ್ಯಾಯದಲ್ಲಿ ಬರುವ ಹಿಂಸೆಗಳಿಗೆ ಸಿದ್ಧರಾಗಲು ಹೇಗೆ ಸಹಾಯ ಮಾಡುತ್ತದೆ? ಅಥವಾ ಇವು 52 ಮತ್ತು 53ನೇ ಅಧ್ಯಾಯದಲ್ಲಿ ನುಡಿಯುವುದನ್ನು ಹೆಚ್ಚು ಎದ್ದುಕಾಣುವಂತೆ ಮಾತ್ರ ಮಾಡುತ್ತವೆಯೆ?

ಯೆಶಾಯ 52:13 ರಿಂದ 53:1ನೇ ವಚನಗಳು ಪದ್ಯವನ್ನು ಬೆರಗು ಹುಟ್ಟಿಸುವ ಭಿನ್ನತೆಯೊಂದಿಗೆ ಆರಂಭಿಸುತ್ತವೆ, ಸೇವಕನು ಪ್ರಗತಿ ಹೊಂದಿ ಉನ್ನತಕ್ಕೇರಿಸಲ್ಪಡುತ್ತಾನೆ. ಆದರೆ ಆತನ ರೂಪವು ಗುರುತು ಹಿಡಿಯಲಾರದಷ್ಟು ಮಾರ್ಪಾಡಾಗಿರುತ್ತದೆ. ಹಾಗಿರುವುದರಿಂದ ಈತನನ್ನು ಯಾರು ನಂಬುತ್ತಾರೆ?

ಯೆಶಾಯ 53:2 ಮತ್ತು 3ನೇ ವಚನಗಳು ಆತನು ಶೋಚನೀಯ ಪರಿಸ್ಥಿತಿಯಿಂದ ದೀನನಾಗಿ ಸಾಧಾರಣ ರೂಪಿನಲ್ಲಿ ಹುಟ್ಟಿಬರುವುದರಿಂದ ಹಿಡಿದು ದುಃಖಿತನಾಗಿ ದಿಕ್ಕರಿಸಲ್ಪಡುವವರೆಗೂ ಇರುವ ವಿಷಯದಿಂದ ಆರಂಭವಾಗುತ್ತವೆ. ಯೆಶಾಯ 53:4–6 ವಚನಗಳು ಆತನು ಹೊತ್ತಹೊರೆಯು ನಮ್ಮ ಸಂಕಟವೆಂದು ನಮ್ಮ ದ್ರೋಹಗಳ ದೆಸೆಯಿಂದ ಆತನ ಬಾಧೆಪಡುವುದನ್ನು ವಿವರಿಸುತ್ತವೆ. ಯೆಶಾಯ 53:7–9 ವಚನಗಳು ಆತನು ಯಾವ ಅನ್ಯಾಯವನ್ನು ಮಾಡದಿದ್ದರೂ ದುಷ್ಟರ ಮಧ್ಯೆ ಪುಷ್ಟರ ನಡುವೆ ಹೂಣಿಡುವುದನ್ನು ವಿವರಿಸುತ್ತವೆ. ಯೆಶಾಯ 53:10–12 ವಚನಗಳು ಸೇವಕ ಉನ್ನತಸ್ಥಿತಿಗೆ ಏರುವುದನ್ನು ಯೆಶಾಯ 52:13ರಲ್ಲಿ ಮುಂದಾಗಿ ಕಂಡು ಹೇಳಿರುವಂತೆ ನಡೆಯುವುದನ್ನು ನೋಡುತ್ತೇವೆ. ಈ ಗೀತೆಯನ್ನು ಫಿಲಿಪ್ಪಿ 2:5–11 ವಚನಗಳಿಗೆ ಹೋಲಿಸಿರಿ. ಇಲ್ಲಿ ಯೇಸುಕ್ರಿಸ್ತನು ದೇವರಾಗಿರುವುದರಿಂದ ಆರಂಭಿಸಿ ದಾಸನರೂಪವನ್ನು ಧರಿಸಿಕೊಂಡು ಶಿಲುಬೆಯ ಮರಣಕ್ಕೆ ಒಪ್ಪಿಸಿಕೊಡುವವರೆಗೂ ತಿಳಿಸುತ್ತವೆ. ಆದುದರಿಂದ ದೇವರು ಆತನನ್ನು ಎಲ್ಲರೂ ಕರ್ತನೆಂದು ಒಪ್ಪಿಕೊಳ್ಳುವ ಹಾಗೆ ಮಹೋನ್ನತ ಸ್ಥಾನಕ್ಕೆ ಏರಿಸುತ್ತಾನೆ ಯೆಶಾಯ 49:7ಕ್ಕೆ ಹೋಲಿಸಿರಿ).

ಯೆಶಾಯ 52:13 ರಿಂದ 53:12 ರವರೆಗಿನ ಎಲ್ಲಾ ವಚನಗಳನ್ನು ಓದಿರಿ. ಯೇಸುಕ್ರಿಸ್ತನು ನಮಗೆ ಮಾಡಿದುದೆಲ್ಲವನ್ನೂ ಬರೆಯಿರಿ. ನಮಗಾಗಿ ಆತನು ಮಾಡಿರುವ ಯಾವ ಕಾರ್ಯಗಳು ನಮ್ಮ ರಕ್ಷಣೆಗೆ ಆಧಾರವಾಗಿವೆ ಎಂಬುದನ್ನು ಚಿಂತಿಸಿರಿ.

**ಮಂಗಳವಾರ** **ಮಾರ್ಚ್ 2**

## ಯಾರು ನಂಬಿದ್ದರು? (ಯೆಶಾಯ 52:13–53:12)

ಯೆಶಾಯ 52:13ನೇ ವಚನದಲ್ಲಿ ದೇವರ ಸೇವಕನು ಉನ್ನತಸ್ಥಾನಕ್ಕೆ ಏರಿಸಲ್ಪಡುವುದನ್ನು ನೋಡುತ್ತೇವೆ, ಯಾವುದೇ ಮುನ್ಸೂಚನೆಯನ್ನೂ ಎಚ್ಚರಿಕೆಯನ್ನೂ ನೀಡದೆ ಆತನ ರೂಪವು ವಿಕಾರವಾಗಿರುವುದನ್ನು ವರ್ಣಿಸುತ್ತದೆ. ಆತನು ಸಕಲ ಮನುಷ್ಯರಲ್ಲಿ ಒಬ್ಬನೆಂದು ಗುರುತು ಹಿಡಿಯಲಾರದಂತಾಗಿದ್ದಾನೆ. ಯೇಸುಕ್ರಿಸ್ತನ ಮುಖವು (ರೂಪವು) ಯಾಕೆ ವಿಕಾರವಾಯಿತು ಎಂಬುದನ್ನು

ಹೊಸ ಒಡಂಬಡಿಕೆಯು ನಮಗೆ ನಿರೂಪಿಸುತ್ತದೆ. ಆತನನ್ನು ಕೊರಡೆಗಳಿಂದ ಹೊಡೆದರು, ಮುಳ್ಳಿನ ಕಿರೀಟ ತೊಡಿಸಿದರು, ಶಿಲುಬೆಗೇರಿಸಿದರು ಇವೆಲ್ಲವುಗಳಿಗಿಂತ ಮುಖ್ಯದ ಕಾರಣವೇನೆಂದರೆ ಆತನು ಮಾನವಕುಲದ ಸಕಲ ಪಾಪಗಳನ್ನು ಹೊತ್ತುಕೊಂಡಿದ್ದನು. ಪಾಪವು ಎಂದಿಗೂ ಸಹಜವಾದ ಉದ್ದೇಶವನ್ನು ಹೊಂದಿಲ್ಲ, ಅದನ್ನು ಹೊತ್ತುಕೊಂಡ ಪ್ರಯುಕ್ತ ಮನುಷ್ಯ ಕುಮಾರನು ಮನುಷ್ಯನಂತೆ ಕಾಣಿಸಲಿಲ್ಲ (ವಿಕಾರನಾದನು).

ಇದನ್ನು ಯೋಬನ ಕಥೆಯೊಂದಿಗೆ ಹೋಲಿಸಿರಿ. ಆಸ್ತಿ, ಅಂತಸ್ತು ಬಲದಲ್ಲಿ ಬಹಳ ಎತ್ತರಸ್ಥಾನದಲ್ಲಿದ್ದ ಯೋಬನು ಇದ್ದಕ್ಕಿದ್ದ ಹಾಗೆಯೇ ಒಮ್ಮೆಲೆ ಎಲ್ಲವನ್ನು ಕಳೆದುಕೊಂಡು ಚಿಂತಾಜನಕ ಸ್ಥಿತಿಗೆ ಒಂದು ನೆಲದ ಮೇಲೆ ಬೂದಿಯಲ್ಲಿ ಕೂತುಕೊಂಡು ತನ್ನ ಮೈಮೇಲಿನ ಗಾಯುಗಳನ್ನು ಬೋಕಿಯಿಂದ ಕೆರೆದುಕೊಳ್ಳುತ್ತಿದ್ದನು (ಯೋಬ 1 ಮತ್ತು 2ನೇ ಅಧ್ಯಾಯ). ಅವನ ಮೊದಲ ಸ್ಥಿತಿಗೂ ಈಗಿನ ಸ್ಥಿತಿಗೂ ಬಹಳ ಅಂತರವಿದ್ದ ಕಾರಣ ಮೊದಮೊದಲಿಗೆ ಅವನ ಸ್ನೇಹಿತರೇ ಅವನನ್ನು ಗುರುತು ಹಿಡಿಯಲಾರದೆ ಹೋದರು. ಪ್ರಶ್ನೆ ಏನೆಂದರೆ ಯೋಬನು ಯಾಕೆ ಕಷ್ಟದಲ್ಲಿ ಬಿದ್ದನು? ಅವನಂತೆಯೇ ದೇವರಿಂದ ಅಭಿಷಿಕ್ತನಾದ ಯೇಸುಕ್ರಿಸ್ತನು ಸಹಾ ಯಾಕೆ ಬಾಧೆಪಟ್ಟನು? ಇವರಿಬ್ಬರೂ ಶಿಕ್ಷೆಗೆ ಅಪಾತ್ರರಾಗಿದ್ದರು. ನಿರಪರಾಧಿಗಳಾಗಿದ್ದರು, ಆದಾಗ್ಯೂ ಅವಿರಿಗೇಕೆ ಘೋರಕಷ್ಟಗಳು?

ಈ ದಿನದ ಅಧ್ಯಯನಕ್ಕಿರುವ ಸತ್ಯವೇದ ವಚನಗಳನ್ನು ಓದಿರಿ ಮತ್ತು ಯಾವ ವಚನಗಳಲ್ಲಿ ನಿರಪರಾಧಿಯಾದವನು ಅಪರಾಧಿಗಳಿಗೋಸ್ಕರ ಬಾಧೆ ಪಡುವುದನ್ನು ಕಾಣುತ್ತೇವೆ? ಅಲ್ಲಿ ನಮಗೆ ಅವಶ್ಯಕವಾಗಿರುವ ಯಾವ ಸಂದೇಶಗಳಿವೆ?

ಯೆಶಾಯ 53:1ನೇ ವಚನದಲ್ಲಿರುವ ಪ್ರಶ್ನೆಗಳನ್ನು ನೋಡಿರಿ. ಈ ಪ್ರಶ್ನೆಗಳು ನಂಬಲಾರದ ವಿಷಯಗಳನ್ನು ನಂಬುವಂತೆ ಒಡ್ಡುವ ಸವಾಲನ್ನು ಒತ್ತಿ ಹೇಳುತ್ತವೆ (ಇದನ್ನು ಯೋಹಾನ 12:37–41ರ ಜೊತೆಗೆ ಹೋಲಿಸಿರಿ) ಮತ್ತು ಇನ್ನುಳಿದ ಕಥಾಭಾಗವನ್ನು ಮೌನವಾಗಿ ಕೇಳಿಸಿಕೊಳ್ಳುವಂತೆ ಎಚ್ಚರಿಕೆ ನೀಡುತ್ತವೆ.

ಆದರೆ ಪ್ರಶ್ನೆಗಳು ಒಂದುಮನವಿಯಾಗಿಯೂ ಸೂಚಿತವಾಗಿದೆ. ಈ ಸಾಂದರ್ಭಿಕತೆಯಲ್ಲಿ ಎರಡು ಪ್ರಶ್ನೆಗಳ ನಡುವೆಯಿರುವ ಸಮಾನತೆಯು ದೇವರ ಬಾಹು ಅಥವಾ ರಕ್ಷಣಾ ಸಾಮರ್ಥ್ಯ (ಯೆಶಾಯ 52:10ರ ಜೊತೆ ಹೋಲಿಸಿರಿ). ಇದು ಯಾರು ಈ ಸಂದೇಶ (ವರದಿ)ಯನ್ನು ನಂಬುತ್ತಾರೋ ಅವರಿಗೆ ಪ್ರಕಟವಾಗುವುದನ್ನು ಸೂಚಿಸುತ್ತದೆ. ನೀವು ದೇವರ ರಕ್ಷಣಾ ಸಾಮರ್ಥ್ಯವನ್ನು ಅನುಭವಿಸಬೇಕೆ? ಹಾಗಾದರೆ ನೀವು ಈ ಸಂದೇಶವನ್ನು (ವರದಿಯನ್ನು) ನಂಬಿರಿ.

ಯೆಶಾಯ 53:6ನೇ ವಚನವನ್ನು ಎಚ್ಚರಿಕೆಯಿಂದ ಗಮನಿಸಿರಿ ಇಲ್ಲಿರುವ ನಿರ್ದಿಷ್ಟ ಸಂದೇಶ ಯಾವುದು? ನೀನು ಹಿಂದೆ ಮಾಡಿದ ಪಾಪಗಳು ಮತ್ತು ಸೋಲುಗಳ ಹೊರತಾಗಿಯೂ ವೈಯಕ್ತಿಕವಾಗಿ ನಿಮಗೆ ನಿರೀಕ್ಷೆಯನ್ನು ಕೊಡುವುದರ ಬಗ್ಗೆ ಈ ವಚನವು ಏನು ಹೇಳುತ್ತದೆ?

**ಬುಧವಾರ** **ಮಾರ್ಚ್ 3**

## ಇತರರು ನಮ್ಮನ್ನು ತಲುಪಲಾರದ ಪರಿಸ್ಥಿತಿ (ಯೆಶಾಯ 53:3–9)

ನೋಡುವುದಕ್ಕೆ ವಿಶೇಷವಾದ ಮೌಲ್ಯವಿಲ್ಲದ, ತಿರಸ್ಕೃತವಾದ ಒಂದು ಅಪಾಯಕರ ಸ್ಥಿತಿಯಲ್ಲಿರುವ ಮರವನ್ನು ಬಾಧೆಗೊಳಗಾದ ಸೇವಕನನ್ನು ನಿರೂಪಿಸುವುದಕ್ಕೆ ನಮಗೆ ಕೊಡಲಾಗಿದೆ (ಯೆಶಾಯ 53:2,3) ಯೆಶಾಯನು ನಮ್ಮನ್ನು ಪಾತಾಳದ ಸಮೀಪದಲ್ಲಿ ನಿಂತಿರುವ ತರುಣನ ಬಳಿಗೆ ಕರೆದೊಯ್ಯುತ್ತಾನೆ. ಇದರ ಹಿನ್ನೆಲೆಯು ನಮಗೆ ಮುಂಚಿತವಾಗಿ ಕೊಡಲ್ಪಟ್ಟಿದ್ದರೂ ನಾವು ಸಿದ್ಧರಾಗಿಲ್ಲವೆಂಬುದರ ಅರ್ಥವೇನೆಂದರೆ ನಾವು ಆ ಸೇವಕನ ಸೌಭಾಗ್ಯವನ್ನು ಅನಿವಾರ್ಯವೆಂದು ಒಪ್ಪಿಕೊಂಡಿದ್ದೇವೆ. ಇದಕ್ಕೆ ವ್ಯತಿರಿಕ್ತವಾಗಿ ಯೆಶಾಯನು ನಮಗಾಗಿ ಒಂದು ವರದ ಮಗುವು ಹುಟ್ಟಿದೆ, ಆತನು ಸಮಾಧಾನದ ಪ್ರಭುವು ಇತರರು ಆತನನ್ನು ತಿರಸ್ಕರಿಸುತ್ತಾರೆ. ಆದರೆ ಆತನು ನಿಜವಾಗಿ ಯಾರೆಂದು ನಮಗೆ ತಿಳಿದಿದೆ.

ಯಾರೋ ಒಬ್ಬರು "**ನಾವು ನಮ್ಮ ವೈರಿಗಳನ್ನು ಭೇಟಿಯಾದೆವು ನಾವೇ ಆ ವೈರಿಗಳು**" ಎಂದು ಹೇಳಿರುವಂತೆ. ಧಿಕ್ಕರಿಸಲ್ಪಟ್ಟವರಲ್ಲಿ, ತಿರಸ್ಕೃತರಾದವರಲ್ಲಿ

ಅಥವಾ ಬಾದೆಪಡುತ್ತಿರುವವರ ಪೈಕಿ ಈ ಸೇವಕನೇ ಮೊದಲಿಗನಲ್ಲ. ದಾವೀದನು ತನ್ನ ಮಗನಾದ ಅಬ್ಷಾಲೋಮ ದೆಸೆಯಿಂದ ಪಲಾಯನ ಮಾಡಿ ಅಲೆಯುತ್ತಿರುವಾಗ ಈ ಎಲ್ಲಾ ಅವಮಾನಗಳನ್ನು ಅನುಭವಿಸಿದ್ದನು (2 ಸಮುವೇಲ 15:30). ಆದರೆ ಈ ಸೇವಕನು ಹೊತ್ತುಕೊಂಡ ಬಾಧೆಗಳು ಅವನವುಗಳಲ್ಲ ಅವನ ಸ್ವಯಂಕೃತ ಪಾಪಗಳ ಫಲಿತಾಂಶಗಳಲ್ಲ. ಕೇವಲ ಇನ್ನೊಬ್ಬನ ವೈಯಕ್ತಿಕವಾದ ಪಾಪಗಳನ್ನು ಹೊರಲಿಲ್ಲ. ನಮ್ಮೆಲ್ಲರ ದೋಷಫಲವನ್ನು ಯೆಹೋವನು ಅವನ ಮೇಲೆ ಹಾಕಿದನು" (ಯೆಶಾಯ 53:6). ಯಾಕೆ ಬಾಧೆ ಪಡಬೇಕು? ಎಂಬ ಪ್ರಶ್ನೆಗೆ ಉತ್ತರವಾಗಿ ಯೆಶಾಯನು ಹೇಳುವ "ಪರೀಕ್ಷಿಸುವ ಸತ್ಯ" ಎಂದು ಹೇಳಬಹುದು. ದೇವರ ಪ್ರೀತಿಯ ದೆಸೆಯಿಂದ ಆತನ ಅಭಿಷಿಕ್ತನು (ಮೆಸ್ಸೀಯನು) ಬಾಧೆಪಡಲು ಆಯ್ಕೆ ಮಾಡಿಕೊಂಡನು. ಆದರೆ ಯಾಕೆ? ಯೆಶಾಯನು ಯೋಚಿಸಲಾಗದ ಸತ್ಯವನ್ನು ಪೂರ್ಣಗೊಳಿಸಲು ಬಂಗಾರದ ಮೊಳೆಯನ್ನೇ ಹೊಡೆದು ನಾಟಿಸುತ್ತಿದ್ದಾನೆ. ದೇವರ ಅಭಿಷಿಕ್ತನು ಬಾಧೆಯನ್ನು ಅನುಭವಿಸಲು ಯಾಕೆ ಆಯ್ಕೆ ಮಾಡಿಕೊಂಡನೆಂದರೆ ತಲುಪಲಾಗದವರನ್ನು ತಲುಪುವುದಕ್ಕೋಸ್ಕರ, ತಲುಪಲಾಗದವರೆಂದರೆ ನಾವೇ (ಮಾನವರು). ಇದನ್ನು ಅರ್ಥಮಾಡಿಕೊಳ್ಳಲಾಗದವರು ಆತನು ದೇವರಿಂದಲೇ ಬಾಧಿತನಾಗಿದ್ದಾನೆ ಎಂದು ಎಣಿಸುತ್ತಾರೆ (ಯೆಶಾಯ 53:4). ಯೋಬನ ಸ್ನೇಹಿತರು ಯೋಬನು ಪಡುತ್ತಿರುವ ಬಾಧೆಗೆ ಅವನ ಪಾಪಗಳೇ ಕಾರಣವೆಂದು ತಿಳಿದುಕೊಂಡಂತೆಯೇ ಮತ್ತು ಯೇಸುಕ್ರಿಸ್ತನು ಶಿಷ್ಯರು ಆತನನ್ನು "**ಗುರುವೇ, ಇವನು ಕುರುಡನಾಗಿ ಹುಟ್ಟುವುದಕ್ಕೆ ಯಾರು ಪಾಪ ಮಾಡಿದರು? ಇವನೋ? ಇವನ ತಂದೆತಾಯಿಗಳೋ**" (ಯೋಹಾನ 9:2) ಎಂದು ಕೇಳಿದಂತೆಯೇ ಶಿಲುಬೆಯ ಮೇಲೆ ತೂಗುಹಾಕಲ್ಪಟ್ಟ ಕ್ರಿಸ್ತನನ್ನು ನೋಡಿದವರು ಆತನನ್ನು ಕುರಿತು ಬಹಳ ಕೆಟ್ಟದ್ದನ್ನೇ ಊಹಿಸುತ್ತಾರೆ. "**ಮರಕ್ಕೆ ತೂಗುಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನು**" ಎಂದು ಮೋಶೆ ಹೇಳಿಲ್ಲವೆ? (ಧ.ಕಾಂಡ 21:23 ಇದನ್ನು ಅರಣ್ಯಕಾಂಡ 25:4ಕ್ಕೆ ಹೋಲಿಸಿರಿ).

ಆದಾಗ್ಯೂ ಇದೆಲ್ಲಾ ದೇವರ ಚಿತ್ತ (ಯೆಶಾಯ 53:10). ಯಾಕೆ? "ಯಾಕೆಂದರೆ ಕ್ರಿಸ್ತನು ನಮ್ಮನ್ನು ಧರ್ಮಶಾಸ್ತ್ರದ ಶಾಪದಿಂದ ಬಿಡಿಸಲು ಆತನೇ ನಮಗೋಸ್ಕರ

ಶಾಪಗ್ರಸ್ತನಾದನು" (ಗಲಾತ್ಯ 3:13). ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪರೂಪಿಯಾಗಿ ಮಾಡಿದನು (2 ಕೊರಿಂಥ 5:23).

**"ಎಂಥಾ ಬೆಲೆಯನ್ನು ಶಿಲುಬೆಯ ಮೇಲೆ ಕ್ರಿಸ್ತನು ನಮಗೆ ತೆತ್ತಿದ್ದಾನೆ! ಶಿಲುಬೆಯನ್ನು ಅದರ ಮೇಲೆ ತೂಗಾಡುವ ಯಜ್ಞದ ಕುರಿಯನ್ನು ನೋಡಿರಿ. ಕ್ರೂರವಾದ ಮೊಳೆಗಳಿಂದ ತೂರಿಸಿಕೊಂಡ ಆತನ ಅಂಗೈಗಳನ್ನು ನೋಡಿರಿ. ಕಂಬಕ್ಕೆ ಸೇರಿಸಿ ಮೊಳೆ ನಾಟಿಸಿಕೊಂಡ ಕಾಲುಗಳನ್ನು ನೋಡಿರಿ. ಯೇಸುಕ್ರಿಸ್ತನು ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಹೊತ್ತುಕೊಂಡನು. ಆ ಬಾಧೆ, ಆ ಯಾತನೆ ನಮ್ಮ ವಿಮೋಚನೆಗೆ ತೆತ್ತ ಬೆಲೆಯಾಗಿದೆ"** – ಎಲೆನ್ ಜಿ ವೈಟಮ್ಮನವರ God's Amazing Grace ಪುಟ 172.

ನಮ್ಮನ್ನು ರಕ್ಷಿಸುವ ಒಂದೇ ಸಾಧನವೆಂಬಂತೆ ಒಮ್ಮೆಲೆ ಇಡೀ ಲೋಕದ ಪಾಪಗಳ ಭಾರ, ಪಾಪಪ್ರಜ್ಞೆ ಮತ್ತು ಶಿಕ್ಷೆ ಪ್ರತಿಪಾಪಿಯ ಪ್ರತಿ ಪಾಪವು ಶಿಲುಬೆಯ ಮೇಲೆ ತೂಗುವ ಕ್ರಿಸ್ತನ ಮೇಲೆ ಬಿದ್ದವು! ನಮ್ಮನ್ನು ಅದರಿಂದ ಬಿಡಿಸಲು ಅಂತಹ ಬೆಲೆಯನ್ನು ಬೇಡುವ ಪಾಪವು ಎಷ್ಟು ಕೆಟ್ಟದ್ದು ಎಂಬುದರ ಬಗ್ಗೆ ಸೇವಕನ ತ್ಯಾಗ ಏನು ಹೇಳುತ್ತದೆ? ಇದು ನಮಗೋಸ್ಕರ ಅಂತಹ ದೊಡ್ಡ ಬೆಲೆಯನ್ನು ತೆರುವಂತೆ ಮಾಡಿದ ದೇವರ ಪ್ರೀತಿಯ ಬಗ್ಗೆ ಏನು ಹೇಳುತ್ತದೆ?

**ಗುರುವಾರ** **ಮಾರ್ಚ್ 4**

## ಪರಿವರ್ತಿಸುವ ಒಂದು ಪರಿಹಾರಕ ಯಜ್ಞ (ಯೆಶಾಯ 53:10–12)

ಸೇವಕನ ಪ್ರಾಣವು "ಒಂದು ಪಾಪಪರಿಹಾರ ಯಜ್ಞ" ಎಂಬುದರ ಅರ್ಥವೇನು? (ಯೆಶಾಯ 53:10).

ಪಾಪಪ್ರಜ್ಞಾಯಜ್ಞ ಅಥವಾ "ಪರಿಹಾರಕ ಯಜ್ಞ" ಎಂಬುದನ್ನು ಸೂಚಿಸುವ ಇಬ್ರಿಯ ಪದವು (ಯಾ.ಕಾಂಡ 5:14 ರಿಂದ 6:7 ಮತ್ತು ಯಾ.ಕಾಂಡ 7:1–7) ಮತ್ತೊಬ್ಬರಿಗೆ ಉದ್ದೇಶಪೂರ್ವಕವಾಗಿ ಮಾಡಿದ ದ್ರೋಹ (ತಪ್ಪು)ಗಳನ್ನು ಪರಿಹರಿಸುವ ಯಜ್ಞ (ಯಾ.ಕಾಂಡ 6:2,3) ಅಂತಹ ಪಾಪಗಳನ್ನು ಯೆಶಾಯನು ಒಟ್ಟಾಗಿಸಿ ಹೇಳುತ್ತಾನೆ (ಯೆಶಾಯ 1 ರಿಂದ 3 ಅಧ್ಯಾಯಗಳು, ಯೆಶಾಯ

10:1,2, ಯೆಶಾಯ 58). ಮಾತ್ರವಲ್ಲದೆ ಪಾಪವನ್ನೆಸಗಿದ ವ್ಯಕ್ತಿಯು ಯಾರ ವಿರೋಧವಾಗಿ ಎಸಗಿದ್ದಾನೋ ಅವನೊಂದಿಗೆ ಸಂಧಾನ ಮಾಡಿಕೊಳ್ಳಲು ಮೊದಲು ಅವನಿಗೆ ನಷ್ಟವನ್ನು ಅದರ ಜೊತೆಗೆ ದಂಡವನ್ನು (ಶಿಕ್ಷೆಯನ್ನು) ಕೊಟ್ಟು ಅನಂತರ ಯಜ್ಞವನ್ನು ಅರ್ಪಿಸುವಾಗ ದೇವರಿಂದ ಕ್ಷಮಾಪಣೆ ಹೊಂದುತ್ತಿದ್ದನು (ಯಾ.ಕಾಂಡ 6:4–7 ಇದನ್ನು ಮತ್ತಾಯ 5:23,24ಕ್ಕೆ ಹೋಲಿಸಿ ನೋಡಿರಿ). ಒಂದುವೇಳೆ ಆಕಸ್ಮಿಕವಾಗಿ ದೇವರಿಗೆ ಸೇರಿದ ವಸ್ತುವನ್ನು ದುರುಪಯೋಗ ಮಾಡಿದ್ದರೆ ಪರಿಹಾರವು ದೇವರಿಗೆ ಸೇರುತ್ತಿತ್ತು (ಯಾ.ಕಾಂಡ 5:16).

ಯೆಶಾಯ 40:2ರು ಅದಕ್ಕೆ ಗಡು ತೀರಿತು, ವಿಧಿಸಿದ ದೋಷಫಲವೆಲ್ಲಾ ನೆರವೇರಿತು, ಅದರ ಎಲ್ಲಾ ಪಾಪಗಳಿಗೂ ಯೆಹೋವನ ಕೈಯಿಂದ ಎರಡರಷ್ಟು ಶಿಕ್ಷೆಯಾಯಿತು" ಎಂದು ಗಡಿಪಾರದ ಜನರಿಗೆ ದೇವರು ಹೇಳಿದುದರ ಅರ್ಥವು ಈವಾಗ ನಮಗೆ ತಿಳಿಯುತ್ತದೆ. ಪರಿಹಾರವಾದ ನಂತರ ಅದಕ್ಕಾಗಿ ಒಂದು ಯಜ್ಞವನ್ನು ಅರ್ಪಿಸಬೇಕಾಗುತ್ತದೆ. ಇದುವೆ ತಾನೆ ಯೆಶಾಯ 53ರಲ್ಲಿ ಇರುವುದು. ದಾರಿ 37 ತಪ್ಪಿಹೋದವರಿಗೋಸ್ಕರ (ಯೆಶಾಯ 53:6) ಕುರಿಯ ಬದಲು ದೇವರ ಸೇವಕನು ವಧ್ಯಸ್ಥಾನಕ್ಕೆ ಒಯ್ಯಲ್ಪಟ್ಟನು (ಯೆಶಾಯ 53:7).

"ಆತನು ಜೀವಲೋಕದಿಂದ ಕೀಳಲ್ಪಟ್ಟನು" (ಯೆಶಾಯ 53:8). ಇದನ್ನು ದಾನಿಯೇಲ 9:26ಕ್ಕೆ ಹೋಲಿಸಿರಿ ಎಂದರೆ ನಮ್ಮ ನಿರೀಕ್ಷೆಯ ಕಿಡಿಯನ್ನು ಹೊತ್ತಿಸುವಂತಹ ಪೂರ್ಣವಾಗಿ ದಹಿಸಿಹೋಗುವ ಸರ್ವಾಂಗ ಹೋಮವಾಗಿ ಅರ್ಪಿಸಿಕೊಂಡು ಆ ಸೇವಕನು ಎಂದೆಂದಿಗೂ ಮರಳಿಬಾರದ ದೇಶದಿಂದ (ಸಮಾಧಿಯಿಂದ) ಮರಣವನ್ನು ಗೆದ್ದು ತನ್ನ ಸಂತಾನವನ್ನು ನೋಡುವುದಕ್ಕೆ ಚಿರಂಜೀವಿಯಾಗಿ ಉನ್ನತಸ್ಥಾನವನ್ನು ಪಡೆದುಕೊಳ್ಳಲು ಎದ್ದುಬಂದನು (ಯೆಶಾಯ 53:10–12).

ಈ ಕೆಳಗೆ ಕೊಟ್ಟಿರುವ ಪ್ರತಿಯೊಂದು ವಚನಗಳನ್ನು ನೋಡಿರಿ. ಯೆಶಾಯ 53ನೇ ಅಧ್ಯಾಯದಲ್ಲಿರುವ ಮೂಲ ಸಂದೇಶವನ್ನೇ ಈ ವಚನಗಳು ಹೇಗೆ ಪ್ರತಿಬಿಂಬಿಸುತ್ತವೆ?

ಕೀರ್ತನೆ 32:1, 2 ______________________________

ರೋಮ 5:8 ________________________________

ಗಲಾತ್ಯ 2:16 ________________________________

ಫಿಲಿ 3:9 ________________________________

1 ಪೇತ್ರ 2:24 ________________________________

ಯೆಶಾಯ 52:13 ರಿಂದ 53:12ನೇ ವಚನದವರೆಗಿರುವ ಸಂದೇಶವನ್ನು ಒಂದೇ ಪುಟಾರ್ಧದಲ್ಲಿ ಸಂಗ್ರಹ ಮಾಡಿ ಬರೆಯಿರಿ ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ನೀವು ಏನನ್ನು ಬರೆಯುವಿರಿ?

**ಶುಕ್ರವಾರ** **ಮಾರ್ಚ್ 5**

**ಹೆಚ್ಚಿನ ಚಿಂತನೆ :** ಯೇಸುಕ್ರಿಸ್ತನು ಶಿಲುಬೆಯ ಮೇಲೆ ತನ್ನ ಸ್ವಂತ ದೇಹದಲ್ಲಿ ನಮ್ಮ ಪಾಪಗಳನ್ನು ಹೊತ್ತುಕೊಂಡನು. ಮರ್ತ್ಯನಾದ ಮನುಷ್ಯನು ಪರಿಹಾರ ಮಾಡಲು ಅಸಾಧ್ಯವಾದ 'ಪಾಪವು' ಎಂಥದ್ದಾಗಿದೆ? ದೇವರು ಮಾತ್ರವೇ ಅದನ್ನು ತೀರಿಸಬೇಕೆಂದರೆ ಅದರಿಂದ ಬರುವ ಶಾಪವು ಎಂಥದ್ದಾಗಿದೆ?

ಪಾಪಕ್ಕೆ ತಕ್ಕ ಶಿಕ್ಷೆಯು ಮರಣವೆಂಬುದನ್ನು ಯೇಸುಕ್ರಿಸ್ತನ ಶಿಲುಬೆಯು ದೃಢಪಡಿಸುತ್ತದೆ..... ಆಹಾ ದೇವರ ಆತ್ಮನು ನಮ್ಮ ಮೇಲೆ ಮಾಡಿದ ಪ್ರಭಾವವನ್ನು ನಮ್ಮ ನೈತಿಕ ಅರಿವಿನಿಂದ ಇಲ್ಲದಂತೆ ಮಾಡಿ ಮರಳುಗೊಳಿಸುವ ಬಲವಾದ ಶಕ್ತಿ ಇದೆಯೆ? ಎಲೆನ್ ಜಿ ವೈಟಮ್ಮನವರ Our High Calling ನಲ್ಲಿ 44ನೇ ಪುಟ.

"ದೇವರ ಸರ್ಕಾರದ ನೇಮಗಳು ದೇವರ ಒಬ್ಬನೇ ಮಗನ ಮರಣದಿಂದ ಹೆಚ್ಚಿನ ಮಹತ್ವ ಹೊಂದಬೇಕಾಗಿದ್ದವು. ಲೋಕದ ಸಕಲ ಪಾಪಗಳ ದೆಸೆಯಿಂದ ಉಂಟಾಗುವ ತಹತಹವನ್ನು ಯೇಸುಕ್ರಿಸ್ತನು ಹೊತ್ತನು. ನಮ್ಮ ಪರಿಪೂರ್ಣತೆಯು ದೇವಕುಮಾರನಾದ ಯೇಸುಕ್ರಿಸ್ತನ ನರಾವತಾರ ಮತ್ತು ಮರಣದ ಮೇಲೆ ನೆಲೆಗೊಂಡಿದೆ. ಆತನು ದೇವರ ದೈವತ್ವವನ್ನು ತನ್ನ ಜೀವಕ್ಕೆ ಆಧಾರ ಮಾಡಿಕೊಂಡಿದ್ದರಿಂದ ಬಾಧೆಗಳನ್ನು ತಾಳಿಕೊಂಡನು. ಅವನಲ್ಲಿ ಅವಿಧೇಯತೆಯು ಅಥವಾ ಪಾಪದ ಲೇಶವಾದರೂ ಇಲ್ಲದ ಕಾರಣ ಭಾರವನ್ನು ಸಹಿಸಿಕೊಂಡನು. ಆತನು ಹೊಂದಿದ ಧರ್ಮಶಾಸ್ತ್ರಾನುಸಾರವಾದ ಶಿಕ್ಷೆಯು

ನ್ಯಾಯಯುತವಾದುದರಿಂದ ಯೇಸುಕ್ರಿಸ್ತನು ಮಾನವನ ಪರವಾಗಿ ಜಯ ಹೊಂದಿದನು. ಧರ್ಮಪ್ರಮಾಣವನ್ನು ಉನ್ನತಪಡಿಸಿ ಘನಪಡಿಸುವ ಮೂಲಕ ಕ್ರಿಸ್ತನು ಮನುಷ್ಯರಿಗೆ ನಿತ್ಯಜೀವವನ್ನು ಸಂಪಾದಿಸಿಕೊಟ್ಟನು" – ಎಲೆನ್ ಜಿ ವೈಟಮ್ಮನವರ ಸೆಲೆಕ್ಟಡ್ ಮೆಸೇಜಸ್, ಒಂದನೇ ಪುಸ್ತಕ 302ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೆಶಾಯ 53:7–9 ವಚನಗಳು ಪಾತಾಳದ ಆಳಕ್ಕೆ ಇಳಿಯುತ್ತವೆ; ಅಭಿಷಿಕ್ತನ ಮರಣ ಮತ್ತು ಸಮಾಧಿ. ಈ ವಚನಗಳಲ್ಲಿರುವ ಯಾವ ಯಾವ ಅಂಶಗಳು ಕ್ರಿಸ್ತನ ಜೀವನದ ಅಂತ್ಯದಲ್ಲಿ ನೆರವೇರಿದವು? (ಮತ್ತಾಯ 26:57 ರಿಂದ 27:60; ಮಾರ್ಕ 14:53 ರಿಂದ 15:46, ಲೂಕ 22:54 ರಿಂದ 23:53 ಮತ್ತು ಯೋಹಾನ 18:12 ರಿಂದ 19:42).

2. ಯೇಸುಕ್ರಿಸ್ತನು ತನ್ನ ಮರಣದಿಂದ ನ್ಯಾಯಪ್ರಮಾಣವನ್ನು ಉನ್ನತ ಪಡಿಸಿದನೆಂದು ಹೇಳುವ ಎಲೆನ್ ಜಿ ವೈಟಮ್ಮನವರ ಮೇಲಿನ ಕೊನೆಯ ಉಲ್ಲೇಖವನ್ನು ಗಮನಿಸಿರಿ. ಅದರ ಅರ್ಥವೇನೆಂದು ಅವರು ಹೇಳುತ್ತಾರೆ? ದೇವರ ನ್ಯಾಯಪ್ರಮಾಣದ ಶಾಶ್ವತತೆಗೆ (ಚಿರಂತತೆಗೆ) ಯೇಸು ಕ್ರಿಸ್ತನ ಮರಣವೇ ಸಾಕ್ಷಿಯಾಗಿದೆ.

**ಸಾರಾಂಶ:** ಯೆಶಾಯನು ದೇವರ ಅಭಿಷಿಕ್ತನ (ಮೆಸ್ಸೀಯನ) ಜನನ, ಜೀವನ ಮತ್ತು ಆತನ ಗುರುತನ್ನು ಕುರಿತು ಹೇಳುತ್ತಾ ಅಂತಿಮವಾಗಿ ನಮಗೆ ನಿರೀಕ್ಷೆಯನ್ನು ಕೊಡುವ ಪರಮದುರಂತವನ್ನು ಪ್ರಕಟಿಸುತ್ತಾನೆ. ಆತನು ನಮ್ಮನ್ನು ತಲುಪಿದನು, ರಕ್ಷಿಸಿದನು, ನಮ್ಮನ್ನೂ ಸೇರಿಸಿಕೊಂಡು ಕಳೆದುಹೋದವರನ್ನು ಹುಡುಕಿ ಸ್ವಸ್ಥಪಡಿಸಿದನು. ದೇವರ ಸೇವಕನಾದ ಮೆಸ್ಸೀಯನು ಸ್ವ–ಇಚ್ಛೆಯಿಂದ ನಮ್ಮ ಸಂಕಟಗಳನ್ನು ಶಿಕ್ಷೆಗಳನ್ನು ಹೊತ್ತುಕೊಂಡನು.